Mr. SPEAKER.—If suggestions are going to be made in this manner, I do not think there is any purpose to have a Business Advisory Committee. If every member is to get up and say that he wants 12 hours for one Bill and 20 hours for the other, then I think there is no necessity for the Business Advisory Committee.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ಪಾಮಿ, ಬಿಸಿನೆಸ್ ಅಡ್‌ವೈಸರಿ ಕಮಿಟಿಯವರು ಏನು ರಿಪೋರ್ಟ್ ಕೊಟ್ಟಿದ್ದಾರಯ್ಯೋ ಅದನ್ನು ತಿರಸ್ಕರಿಸಬೇಕು ಅಥವಾ ಅದಕ್ಕೆ ಅಗೌರವ, ಅನಾದರಣೆ ತೋರಿಸಬೇಕೆಂಬುದಲ್ಲ ನಮ್ಮ ಉದ್ದೇಶ. ಮೈನೂರು ರಾಜ್ಯದ ಗೇಣಿ ಶಾಸನ ಕಾನೂನು, ಗೇಣೀದಾರರ ವಿಧೇಯಕ, ಲ್ಯಾಂಡ್ ರೆವಿನ್ಯೂ ಕೋಡ್ ಬಿಲ್ ಎಂದು ಏನೇನು ಹೇಳಿದ್ದಾರೆಯ್ಯೋ, ಅವುಗಳ ಕೆಳಗೆ ಎಲ್ಲಾ ಹೇಳುವುದಕ್ಕೆ ಬರುತ್ತದೆ. ಅವುಗಳಲ್ಲಿ ಸರ್ಕಾರದ ರೀತಿ ನೀತಿ, ಅವರು ಲ್ಯಾಂಡ್ ರಿಫಾರ್ಮ್‌ಸ್ ಹೇಗೆ ತಡಮಾಡಿದ್ದಾರೆ ಮುಂತಾದ್ದನ್ನೆಲ್ಲಾ ಹೇಳುವುದಕ್ಕೆ ಬರುತ್ತದೆ. ಅದಕ್ಕೊಸ್ಕರ ಹೆಚ್ಚಿನ ಕಾಲಬೇಕು. ಕಮಿಟಿ ಮಾಡಿದ್ದು ತಪ್ಪು ಎಂದು ಹೇಳುವ ಗೋಜಿಗೆ ಹೋಗುವುದಿಲ್ಲ. ತಮಗೆ ಅಧಿಕಾರವಿದೆ; ತಮ್ಮ ಅಧಿಕಾರ ವ್ಯಾಪ್ತಿಯೊಳಗೆ ಸ್ವಲ್ಪ ಹೆಚ್ಚುಕಾಲ ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಶ್ರೀಮಾನ್ ಸುಂಠಣ್‌ರವರು ಹೇಳಿದ ಹಾಗೆ, Police Bill ಮತ್ತು ಭೂಕಂದಾಯದ ಬಿಲ್ಲು ಅತಿಮುಖ್ಯವಾದುವು. ಒಂದೇ ಒಂದು ಬಿಲ್ಲನ್ನು 12–15 ಗಂಟೆ ಈ ಮನೆಯಲ್ಲಿ ಡಿಸ್‌ಕಸ್ ಮಾಡಿದ್ದೇವೆ. ಅದಕ್ಕೋಸ್ಕರ ಸರ್ಕಾರ ಮತ್ತು ತಾವು ಮತ್ತೊಮ್ಮೆ ಯೋಚನೆಮಾಡಿ ಸ್ವಲ್ಪ ಜಾಸ್ತಿ ಟೈಂ ಕೊಟ್ಟರೆ ಒಳ್ಳೆಯದು. ತಾವು ಭರವಸೆಕೊಟ್ಟ ಮೇಲೆ, ತಾವು ಇದನ್ನು ನರಿಪಡಿಸುತ್ತೀರೆಂದು ನಂಬಿ, ಇದನ್ನು ಒಪ್ಪಿಕೊಳ್ಳಲೇಬೇಕಾಗಿದೆ.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಇದರಲ್ಲಿ ನನ್ನ ಮಾನ್ಯ ಸ್ನೇಹಿತರು ಹೇಳಿದ ಹಾಗೆ ಒಂದು–ಎರಡನೇ ಮಜೂದೆಗಳಿಗೆ 30 ನಿಮಿಷಗಳನ್ನು, ಇನ್ನೆರಡು ಮಜೂದೆಗಳಿಗೆ ಏಳು-ಏಳು ಗಂಟೆಗಳನ್ನು ಕೊಟ್ಟರೆ. ಈ ಸಮಯ ಸಾಲದು ಎಂದು ಹೇಳುತ್ತೇನೆ. ಇನ್ನೊಂದು ದಿವಸ, ಅಂದರೆ 23ನೇ ತಾರೀಖು ಕೊಡುವುದುಬೇಡ, ಆದ್ದರಿಂದ ಒಂದೊಂದು ಗಂಟೆ 28ರವರೆಗೆ ಹೆಚ್ಚಾಗಿ ಕೊಡೋಣವೆಂಬ ಸಲಹೆಯನ್ನು ಕೊಟ್ಟಿದ್ದಾರೆ. ಇದನ್ನು ನಾವು ಎಷ್ಟರಮಟ್ಟಿಗೆ ಒಪ್ಪಬೇಕೆನ್ನುವುದನ್ನು ಹೇಳುವುದು ಕಷ್ಟ. ಇನ್ನು ಮುಖ್ಯವಾಗಿ ಇದರ ಬಗ್ಗೆ ಹೇಳುವುದೆಂದರೆ, ಇವತ್ತು ರಾಜ್ಯ ಪಾಲರ ಭಾಷಣದ ಮೇಲೆ ವಂದನಾರ್ಪಣ್ ನಿರ್ಣಯ ಈ ಸಭೆಯ ಮುಂದೆ ಬರಬೇಕಾಗಿತ್ತು. ಅದನ್ನು Business Advisory Committee ಹಿಂಡಕ್ಕೆ ಹಾಕಿರುವುದು ಒಂದು ವಿಷಾದವಾದ ವಿಷಯ ಎಂದು ನಾನು ಈ ಸಂದರ್ಭದಲ್ಲಿ ಹೇಳಿ, ಈ ಕಾರ್ಯಕ್ರಮವನ್ನು ಒಪ್ಪಿಕೊಳ್ಳುವುದು ಸಾಧ್ಯವಿಲ್ಲವೆಂದು ಹೇಳುತ್ತೇನೆ.

Mr. SPEAKER.—May I take it that it is adopted?

MEMBERS.—Yes.

Mr. SPEAKER.—The question is:

"That the House agrees with the 8th Report of the Business Advisory Committee."

The motion was adopted.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಒಂದು ಗಂಟೆ ಹೆಚ್ಚಿಗೆ ಕುಳಿತುಕೊಳ್ಳುವ ವಿಚಾರದಲ್ಲೂ ಬಿಸಿನೆಸ್ ಅಡ್ವೈಜರಿ ಕಮಿಟಿಗೆ ಈ ಸಂಬಂಧವಿವೆಯೇ ಎಂದು ನಾನು ತಿಳಿದುಕೊಳ್ಳಬೇಕಾಗಿದೆ.....

Mr. SPEAKER.—That is a suggestion and it becomes valid only when the House agrees to it.

PAPERS LAID ON THE TABLE

SECRETARY.—I beg to lay on the Table a statement showing the Bills which have received the assent of the Governor or the President as the case may be, subsequent to the Report made during the previous session.

(SECRETARY)

STATEMENT

Showing the Bills assented to by the Governor or the President.

Sl. No.	Name of the Bill	Date of assent	Assented by
1	The Mysore Appropriation (No. 6) Bill, 1962.	18th December 1962	Governor
2	The Mysore Motor Vehicles Taxation (Amendment) Bill, 1962.	Do	Do
3	The Mysore Home Guards Bill, 1962.	Do	Do
4	The Mysore Land Revenue (Surcharge) (Amendment) Bill, 1962.	7th January 1963	Do
5	The Bombay Primary Education (Mysore Amendment) Bill, 1962.	Do	Do
6	The Destruction of Records (Mysore Extension and Amendment) Bill, 1962.	Do	Do
7	The Mysore Municipal Laws (Amendment) Bill, 1962.	Do	Do
8	The Mysore Buildings Tax Bill, 1962.	8th January 1963	Do
9	The Industrial Disputes (Mysore Amendment) Bill, 1962.	22nd January 1963	President
10	The Provincial Insolvency (Mysore Extension and Amendment) Bill, 1962.	19th January 1963	Do
11	The Bombay Tenancy and Agricultural Lands (Mysore Amendment) Bill, 1962.	12th February 1963	Do

Member's Representations.

ಶ್ರೀ ಎ. ಜೆ. ಮುಕ್ಕಣ್ಣಪ್ಪ (ಶಿರಾ).—ಈಗ ತಾನೇ ಅಧ್ಯಕ್ಷರು ಶ್ರೀ ನಾಪೋಷಿಯವರ ವಿಚಾರ ತಿಳಿಸಿದರು. ಅವರು 60 ದಿನಗಳವರೆಗೆ ಈ ಅಧಿವೇಶನಕ್ಕೆ ಅಪ್ಪಣೆ ಇಲ್ಲದೆ ಗೈರಾಜರಾದರೆ ಮುಂದೆ ಅವರ ಗತಿ ಏನಾಗುತ್ತದೆ? ಅವರು ತಾವಾಗಿಯೇ ಏನೂ ಗೈರಾಜರಾಗುವುದಿಲ್ಲ. ಅವರನ್ನು ಸರ್ಕಾರ ನಿರ್ಬಂಧದಲ್ಲಟ್ಟಿದೆ.